# ಗುಲ್ಬರ್ಗಾ ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ.

ಸಂಖ್ಯೆ :ಸಕಾಅ/ಆರ್ಎಸ್‌ಡಿ/ಆರ್‌ಸಿಆರ್/ಸಲೆ/ಹಿಸ/2019-20 / 3651 ರವರ ಕಛೇರಿ

Tel No: 08532-233660 (O) ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಿ)

Mobile No : 9448482167 ಕಾರ್ಯ ಮತ್ತು ಪಾಲನೆ ಗ್ರಾಮೀಣ ಉಪ-ವಿಭಾಗ

Email:aeersdraichurgescom@gmail.com ಗು.ವಿ.ಸ.ಕಂ.ನಿ.,ರಾಯಚೂರು.

ಲಗತ್ತು : ದಿನಾಂಕ : 23 DEC 2019

---

## ವಿದ್ಯುತ್ ಗ್ರಾಹಕರ ಜೊತೆಗೆ ಪರಸ್ಪರ ಸಂವಾದ (CONSUMER INTERACTION) ಸಭೆಯ ನಡುವಳಿಗಳು – ರಾಯಚೂರು ಗ್ರಾಮೀಣ ಉಪ ವಿಭಾಗ.

ದಿನಾಂಕ: 21-12-2019 ರಂದು ಸಮಯ ಮಾಧ್ಯಾಹ್ನ 3:30 ಗಂಟೆಗೆ ವಿದ್ಯುತ್ ಗ್ರಾಹಕರ ಜೊತೆಗೆ ಪರಸ್ಪರ ಸಂವಾದ (CONSUMER INTERACTION MEETING)__ಸಭೆಯನ್ನು ಎಲ್ಲಾ ಶಾಖಾಧಿಕಾರಿಗಳು, ರಾಯಚೂರು ಗ್ರಾಮೀಣ ಉಪ-ವಿಭಾಗ ಉಪಸ್ಥಿತಿಯಲ್ಲಿ ನಡೆಸಲಾಯಿತು, ಸದರಿ ಸಭೆಯಲ್ಲಿ ಈ ಕೆಳಕಂಡ ಅಧಿಕಾರಿಗಳು ಹಾಜರಿರುತ್ತಾರೆ.

1) ಶ್ರೀ ರಾಜೇಶ ವರ್ಮಾ ಪ್ರಭಾರಿ ಅಧೀಕ್ಷಕ ಅಭಿಯಂತರರು (ವಿ) ಕಾರ್ಯ ಮತ್ತು ಪಾಲನೆ ವೃತ್ತ ಕಛೇರಿ ಜೆಸ್ಕಾಂ, ರಾಯಚೂರು.
2) ಶ್ರೀ ಹನುಮೇಶ ನಾಯಕ್ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಿ) ಗ್ರಾಮೀಣ ಉಪ- ವಿಭಾಗ ರಾಯಚೂರು.
3) ಶ್ರೀ ರವಿ ಸಹಾಯಕ ಅಭಿಯಂತರರು (ತಾಂತ್ರಿಕ)
4) ಶ್ರೀ ಮೌನೇಶ್ ಸಹಾಯಕ ಲೆಕ್ಕ ಅಧಿಕಾರಿ
5) ಶ್ರೀ ಈರಣ್ಣ ಶಾಖಾಧಿಕಾರಿ ಶಕ್ತಿನಗರ ಶಾಖೆ.
6) ಶ್ರೀ ಜಾವೀದ್ ಶಾಖಾಧಿಕಾರಿ ಚಂದ್ರಬಂಡ ಶಾಖೆ.
7) ಶ್ರೀ ಮಲ್ಲಿಕಾರ್ಜುನ ಶಾಖಾಧಿಕಾರಿ ಯಾಪಲದಿನ್ನಿ ಶಾಖೆ.
8) ಶ್ರೀ ಗೋವಿಂದ ಶಾಖಾಧಿಕಾರಿ ಯರಗೇರ ಶಾಖೆ.
9) ಶ್ರೀ ಹುಲಿರಾಜ್ ಶಾಖಾಧಿಕಾರಿ ಗಿಲ್ಲೇಸುಗೂರು ಶಾಖೆ.
10) ಶ್ರೀ ರಾಜಕುಮಾರ ಶಾಖಾಧಿಕಾರಿ ಕಲಮಲಾ ಶಾಖೆ.
11) ಶ್ರೀ ಪ್ರಕಾಶ (ಪ್ರ) ಶಾಖಾಧಿಕಾರಿ ಯದ್ಲಾಪುರು ಶಾಖೆ.
12) ಶ್ರೀ ಜಿ. ಗೋಪಲ (ಪ್ರ) ಶಾಖಾಧಿಕಾರಿ ಮಟಮಾರಿ ಶಾಖೆ.

ಸಭೆಯ ಪ್ರಾರಂಭದಲ್ಲಿ :-

ಮೊದಲಿಗೆ ಮಾನ್ಯ ಶ್ರೀ ರಾಜೇಶ ವರ್ಮಾ ಪ್ರಭಾರಿ ಅಧೀಕ್ಷಕ ಅಭಿಯಂತರರು (ವಿ), ಜೆಸ್ಕಾಂ, ವಿಭಾಗ ರಾಯಚೂರು ರವರು ಸಭೆಗೆ ಹಾಜರಾದ ಎಲ್ಲಾ ಗ್ರಾಹಕರಿಗೆ ಹಾಗೂ ಅಧಿಕಾರಿಗಳಿಗೆ ಸಭೆಗೆ ಸ್ವಾಗತ ಕೋರಿದರು

ನಂತರ ಗ್ರಾಹಕರ ಕುಂದು ಕೊರತೆಗಳ ಬಗ್ಗೆ ಚರ್ಚಿಸಿ, ಸಂಬಂದಪಟ್ಟ ಶಾಖಾಧಿಕಾರಿಗಳಿಗೆ ಕಾಲಮಿತಿಯೊಳಗೆ ಕ್ರಮವನ್ನು ತೆಗೆದುಕೊಂಡು, ಕ್ರಮ ತೆಗೆದುಕೊಂಡ ಬಗ್ಗೆ ವರದಿಯನ್ನು ಸಲ್ಲಿಸುಲು ಸೂಚಿಸಲಾಯಿತು. ಶಕ್ತಿನಗರ, ಚಂದ್ರಬಂಡ, ಯಾಪಲದಿನ್ನಿ, ಯರಗೇರ, ಗಿಲ್ಲೇಸುಗೂರು , ಕಲಮಲಾ ಮತ್ತು ಯದ್ಲಾಪುರು ಮಟಮಾರಿ ಶಾಖೆಯ ವಿದ್ಯುತ್ ಗ್ರಾಹಕರು ಮೌಖಿಕವಾಗಿ ತಮ್ಮ ಕುಂದು ಕೊರತೆಗಳನ್ನು ತಿಳಿಸಿರುತ್ತಾರೆ ಮತ್ತು ಚರ್ಚಿಸಿಲಾದ ವಿಷಯಗಳು ಈ ಕೆಳಗಿನಂತಿರುತ್ತವೆ.

Scanned by CamScanner

ಸಭೆಯಲಿ ಚರ್ಚಿಸಿಲಾದ ವಿಷಯಗಳು

1. ಶ್ರೀ ಬಸವರಾಜ್ ಗಂಜಳ್ಳಿ ರವರು ತಮ್ಮ ಗ್ರಾಮದಲ್ಲಿ IP Set ನ ಮಳೆಯಿಂದ ವಿಫಲಗೊಂಡ 63 KVA TC ಯನ್ನು ಬದಲಾಯಿಸಲು ಕೇಳಿದರು, ಶ್ರೀಘ್ರದಲ್ಲೇ ಬದಲಾಯಿಸಲಾಗುವುದೆಂದು ತಿಳಿಸಲಾಯಿತು.
2. ಹೆಗ್ಗಸನಳ್ಳಿ MPCL ನ ಹತ್ತಿರ ಹಳೆ ವಿದ್ಯುತ್ ಕಂಬಗಳು ಸಂಪೂರ್ಣ ಬಾಗಿದ್ದು ಅದನ್ನು ಸರಿಪಡಿಸಲು ಕೇಳಿದರು, ಶ್ರೀಘ್ರದಲ್ಲೇ ಸರಿಪಡಿಸಲಾಗುವುದೇಂದು ತಿಳಿಸಲಾಯಿತು.
3. ಯದ್ಲಾಪೂರ್ ಗ್ರಾಮದಲ್ಲಿ ಮನೆಗಳ ಮೇಲೆ ಹಾದುಹೋಗಿರುವ ವಿದ್ಯುತ್ ತಂತಿಗಳನ್ನು ಸ್ಥಳಾಂತರಿಸಲು ಕೋರಿದರು, ಶ್ರೀಘ್ರದಲ್ಲೇ ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಲಾಯಿತು.
4. ಹೆಗ್ಗಸನಳ್ಳಿ ಗ್ರಾಮದಲ್ಲಿ ಶಾಲೆಯ ಪಕ್ಕದಲ್ಲಿರುವ ವಿದ್ಯುತ್ ಕಂಬಕ್ಕೆ ಮುಳ್ಳು ತಂತಿಯನ್ನು ಅಳವಡಿಸಲು ಕೇಳಿದರು, ಶ್ರೀಘ್ರದಲ್ಲೇ ಹಾಕಿಸಲಾಗುವುದೆಂದು ತಿಳಿಸಲಾಯಿದು.
5. ಶ್ರೀ ನರಸಪ್ಪ ರವರು ತಮ್ಮ ತಲಮಾರಿ ಗ್ರಾಮದಲ್ಲಿ IP Set ನ ವಿಫಲಗೊಂಡ 25 KVA TC ಯನ್ನು ಬದಲಾಯಿಸಲು ಕೇಳಿದರು, ಶ್ರೀಘ್ರದಲ್ಲೇ ಬದಲಾಯಿಸಲಾಗುವುದೆಂದು ತಿಳಿಸಲಾಯಿತು.
6. ಶ್ರೀ ಸುರೇಶ ರವರು ತಮ್ಮ ಉಡುಮಗಲ್ ಗ್ರಾಮದ ಮನೆಯ ಮುಂದೆ ಜೊತ್ತುಬಿದ್ದ ತಂತಿಗಳನ್ನು ಸರಿಪಡಿಸಲು ಕೇಳಿದರು, ಶ್ರೀಘ್ರದಲ್ಲೇ ಸರಿಪಡಿಸಲಾಗುವುದೇಂದು ತಿಳಿಸಲಾಯಿತು.
7. ಮಮದಪುರ್ ಗ್ರಾಮದಲ್ಲಿ ಮನೆಗಳ ಮೇಲೆ ಹಾದುಹೋಗಿರುವ ವಿದ್ಯುತ್ ತಂತಿಗಳನ್ನು ಸ್ಥಳಾಂತರಿಸಲು ಕೋರಿದರು, ಶ್ರೀಘ್ರದಲ್ಲೇ ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಲಾಯಿತು.
8. ಗಾಜರಾಳ ಗ್ರಾಮದಲ್ಲಿ ಶಿಥಿಲಗೊಂಡ ಕಂಬಗಳನ್ನು ಬದಲಾಯಿಸಲು ಕೇಳಿದರು, ಶ್ರೀಘ್ರದಲ್ಲೇ ಬದಲಾಯಿಸಲಾಗುವುದೆಂದು ತಿಳಿಸಲಾಯಿದು.
9. ಶ್ರೀ ವೆಂಕಟೇಶ ರವರು ತಮ್ಮ ಬಾಯದೊಡ್ಡಿ ಗ್ರಾಮದ ಮನೆಯ ವಿದ್ಯುತ್ ಬಿಲ್ಲನ್ನು ಸರಿಪಡಿಸಲು ಕೇಳಿದರು, ಸರಿಪಡಿಸಲಾಯಿತು.

ಅಂತಿಮವಾಗಿ ಶ್ರೀ ರಾಜೇಶ ವರ್ಮಾ ಪ್ರಭಾರಿ ಅಧೀಕ್ಷಕ ಅಭಿಯಂತರರು (ವಿ), ಜೆಸ್ಕಾಂ, ವಿಭಾಗ ರಾಯಚೂರು ರವರು ಸಭೆಗೆ ಹಾಜರಾದ ಎಲ್ಲಾ ಗ್ರಾಹಕರಿಗೆ ಕೃತಜ್ಞತೆಗಳನ್ನು ಸಲ್ಲಿಸಿ ಸಭೆಯನ್ನು 05.00 ಗಂಟೆಗೆ ಮುಕ್ತಾಯಗೊಳಿಸಲಾಯಿತು.

ತಮ್ಮ ವಿಶ್ವಾಸಿ

ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಿ)
ಕಾರ್ಯ ಮತ್ತು ಪಾಲನೆ ಗ್ರಾಮೀಣ ಉಪ- ವಿಭಾಗ
ಜೆಸ್ಕಾಂ ರಾಯಚೂರು

ಪ್ರತಿಗಳು:-

1. ಮಾನ್ಯ ಮುಖ್ಯ ಅಭಿಯಂತರರು (ವಿ) ವಲಯ ಗು.ವಿ.ಸ.ಕಂ.ನಿ ಬಳ್ಳಾರಿ ರವರ ದಯಾಪರ ಮಾಹಿತಿಗಾಗಿ ಸಲ್ಲಿಸಲಾಗಿದೆ.
2. ಮಾನ್ಯ ಅಧೀಕ್ಷಕ ಅಭಿಯಂತರರು (ವಿ) ಕಾರ್ಯ ಮತ್ತು ಪಾಲನೆ ವೃತ್ತ ಕಛೇರಿ ಜೆಸ್ಕಾಂ, ರಾಯಚೂರು ರವರ ದಯಾಪರ ಮಾಹಿತಿಗಾಗಿ ಸಲ್ಲಿಸಲಾಗಿದೆ.
3. ಮಾನ್ಯ ಕಾರ್ಯ ನಿರ್ವಾಹಕ ಅಭಿಯಂತರರು (ವಿ) ಕಾರ್ಯ ಮತ್ತು ಪಾಲನೆ ಗ್ರಾಮೀಣ ವಿಭಾಗ ಜೆಸ್ಕಾಂ, ರಾಯಚೂರು ರವರ ದಯಾಪರ ಮಾಹಿತಿಗಾಗಿ ಸಲ್ಲಿಸಲಾಗಿದೆ.
4. ಕಛೇರಿ ಕಡತಕ್ಕೆ /AET-ಈ 31.

Scanned by CamScanner